ಅ) ವಿಜಾಪುರ ಜಿಲ್ಲೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ, ಇದರಲ್ಲಿ ಎಷ್ಟು ಕಾರ್ಖಾನೆಗಳು ಹೊಸದಾಗಿ ಮಂಜೂರಿಯಾಗಿವೆ ಮತ್ತು ಈ ಕಾರ್ಖಾನೆಗಳು ಎಲ್ಲೆಲ್ಲಿ ಇವೆ?

ಆ) ಹೊಸದಾಗಿ ಮಂಜೂರಿಯಾದ ಸಕ್ಕರೆ ಕಾರ್ಖಾನೆಗಳು ಕೆಲಸ ಪ್ರಾರಂಭಿಸಿವೆಯೇ?

ಇ) ವಿಜಾಪುರ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ, ಗಲಗಲಿ ಇದು ಲಾಭದಲ್ಲಿ ನಡೆಯುತ್ತಿದೆಯೇ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ?

ಈ) ಲಾಭದಲ್ಲಿ ನಡೆದಿದ್ದರೆ ಇದುವರೆಗೆ ಗಳಿಸಿದ ಲಾಭವೆಷ್ಟು, ನಷ್ಟದಲ್ಲಿದ್ದರೆ ಅನುಭವಿಸಿದ ನಷ್ಟವೆಷ್ಟು (ವಿವರ ನೀಡುವುದು)

ಶ್ರೀ ಪಿ.ಸಿ. ಸಿದ್ದನಗೌಡರ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) 5. ಇದರಲ್ಲಿ ಹೊಸದಾಗಿ 3 ಸಕ್ಕರೆ ಕಾರ್ಖಾನೆಗಳು ಸ್ಥಾಪನೆಗೆ ಮಂಜೂರಾತಿ ಕೇಂದ್ರ ಸರ್ಕಾರದಿಂದ ದೊರೆತಿದ್ದು, ಈ ಕಾರ್ಖಾನೆಗಳು ಇಂಡಿ ರನ್ನನಗರ (ಮುಧೋಳ್ ತಾಲ್ಲೂಕು) ಮತ್ತು ಹಿರೇಪಡಸಲಗಿ (ಜಮಖಂಡಿ) ತಾಲ್ಲೂಕುಗಳಿಲ್ಲಿವೆ.

ಆ) ಇಲ್ಲ.

ಇ) ನಷ್ಟದಲ್ಲಿ ನಡೆಯುತ್ತಿದೆ.

ಈ) ಕಾರ್ಖಾನೆಯು ಅನುಭವಿಸಿರುವ ನಷ್ಟದ ವಿವರಗಳು ಕೆಳಕಂಡಂತಿವೆ:

ವರ್ಷ	*ಅನುಭವಿಸಿದ ನಷ್ಟ (ಲಕ್ಷ ರೂ.ಗಳಲ್ಲಿ)*
1991-92	21.39
92-93	87.18
93-94	17.31

ದಿನಾಂಕ 31.3.94ಕ್ಕೆ ಇದ್ದಂತೆ ಕಾರ್ಖಾನೆಯು ರೂ. 125.83 ಲಕ್ಷ ಕ್ರೋಢೀಕೃತ ನಷ್ಟ ಅನುಭವಿಸುತ್ತಿರುತ್ತದೆ.

ವಿಜಾಪುರ ನಗರ ಸಭೆಯ ಪುನರ್ ವಿಂಗಡಣೆ

2044 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರಸಭೆಯ ವಿಭಾಗಗಳ ಪುನರ್ ವಿಂಗಡನೆ ಕಾರ್ಯ ಯಾವ ಹಂತದಲ್ಲಿದೆ?

ಅ) ಯಾವ ಆಧಾರದ ಮೇಲೆ ಮರುವಿಂಗಡನೆ ಕಾರ್ಯ ಕೈಗೊಳ್ಳಲಾಗಿದ್ದು ಯಾವ ಯಾವ ವರ್ಗಗಳಿಗೆ ಎಷ್ಟು ಮೀಸಲಾತಿ ನೀಡಲಾಗಿದೆ (ವಿವರ ನೀಡುವುದು)

ಇ) ಮರು ವಿಂಗಡನಾ ಕಾರ್ಯ ಮುಕ್ತಾಯಗೊಂಡ ಮೇಲೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸರ್ಕಾರ ಸ್ವೀಕರಿಸುವುದೇ ಒಂದು ವೇಳೆ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಎಷ್ಟು ದಿನಗಳಲ್ಲಿ ಇತ್ಯರ್ಥಗೊಳಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಇನ್ನೂ ಪ್ರಾರಂಭವಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರ ಕುರಿತು

2045 - ಶ್ರೀ ಬಸವನಗೌಡ ಪಾಟೀಲ್ (ಬಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು.

3) ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದವರು ಎಷ್ಟು ಜಮೀನುಗಳನ್ನು ಒಳಪಡಿಸಿಕೊಂಡಿದ್ದಾರೆ ಹಾಗೂ ಎಷ್ಟು ನಿವೇಶನಗಳನ್ನು ಗುರುತಿಸಿ ಜನರಿಗೆ ವಿತರಿಸಿದ್ದಾರೆ. (ವಿವರನ್ನೊದಗಿಸುವುದು)?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) ಬಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ; 23-7-94 ಮತ್ತು ದಿ: 30-9-94 ರಂದು ಹೂಗಿಡಗಳನ್ನು ನೆಡುವುದು ಮತ್ತು ಹುಲ್ಲುಮೈದಾನವನ್ನು ಅಭಿವೃದ್ಧಿಪಡಿಸುವುದು, ಸಂಗೀತಕಾರಂಜಿ ಒದಗಿಸುವುದು ಹಾಗೂ ಶಿವ, ಕೃಷ್ಣ ಇವರುಗಳ ಮೂರ್ತಿಗಳನ್ನು ಸ್ಥಾಪಿಸುವುದು ಹಾಗೂ ಉದ್ಯಾವನದ ಕಾಮಗಾರಿ ಕೆಲಸಗಳನ್ನು ರೂ. 36.57ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ನಿರ್ಣಯತೆಗೆದುಕೊಂಡಿದೆ. ಈವರೆಗೆ ರೂ. 24.19 ಲಕ್ಷಗಳನ್ನು ವೆಚ್ಚಮಾಡಲಾಗಿದ್ದು ಕೆಲಸವು ಪ್ರಗತಿಯಲ್ಲಿರುತ್ತದೆ.

ಈ ಕಾಮಗಾರಿಗಳ ಬಗ್ಗೆ ಕೆಲವು ಆರೋಪಗಳು ದಿ: 3-7-95ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.